# ‘ಬ್ಯಾಡ್ ಮ್ಯಾನರ್ಸ್ ಮಾಡ್ತೀನಿ ಕಾಗೆ ಬಂಗಾರನೂ ನೋಡ್ತೀರಿ’

■ ಪದ್ಮನಾಭ ಭಟ್

ತಮ್ಮ ನಿರ್ದೇಶನದ ಸಿನಿಮಾಗಳಿಂದಲೇ ಎದ್ದು ಬಂದ ಒಂದು ವಿಕ್ಷಿಪ್ತ ಪಾತ್ರದಂಥ ವ್ಯಕ್ತಿ ಸೂರಿ. ಅವರ ಸಿನಿಮಾಗಳು ಕನ್ನಡ ಚಿತ್ರರಂಗದಲ್ಲಿ ಭಿನ್ನವಾದ, ಅಷ್ಟೇ ಸ್ಪಷ್ಟವಾದ ಕಾಲುದಾರಿಯೊಂದನ್ನು ಮೂಡಿಸಿವೆ. ‘ಪಾಪ್‌ಕಾರ್ನ್ ಮಂಕಿ ಟೈಗರ್’ ಎಂಬ ರಕ್ತಸಿಕ್ತ ಕಚ್ಚಾಲೋಕದಿಂದ ಹೊರಬಂದಿರುವ ಅವರೀಗ ‘ಬ್ಯಾಡ್ ಮ್ಯಾನರ್ಸ್’ ತೋರಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಅಂದಹಾಗೆ ‘ಬ್ಯಾಡ್ ಮ್ಯಾನರ್ಸ್’ ಸೂರಿ ಮತ್ತು ಅಭಿಷೇಕ್ ಅಂಬರೀಷ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಹೊಸ ಸಿನಿಮಾ. ಸೂರಿ ಜೊತೆ ನಡೆಸಿದ ಚುಟುಕು ಮಾತುಕತೆ ಇಲ್ಲಿದೆ.

**◆ ‘ಬ್ಯಾಡ್ ಮ್ಯಾನರ್ಸ್’ ಯಾವ ಬಗೆಯ ಸಿನಿಮಾ?**

ಇದು ಪಕ್ಕಾ ಮಾಸ್ ಸಿನಿಮಾ. ಟೈಟಲ್ ಕೇಳಿದಾಗ ಮನಸಲ್ಲಿ ಏನು ಹೊಳೆಯುತ್ತದಲ್ಲಾ, ಅದೆಲ್ಲವೂ ಈ ಸಿನಿಮಾದಲ್ಲಿ ಇರುತ್ತದೆ. ವ್ಯವಸ್ಥೆ ಹೇಗೆ ನಡೆದುಕೊಳ್ಳುತ್ತದೆ ಅನ್ನುವುದರ ಜೊತೆಗೆ ನಾವು ವ್ಯವಸ್ಥೆಯ ಜೊತೆ ಹೇಗೆ ನಡೆದುಕೊಳ್ಳುತ್ತೇವೆ ಎನ್ನುವುದೂ ಇದರಲ್ಲಿದೆ. ಇಂದು ಬ್ಯಾಡ್ ಮ್ಯಾನರ್ಸ್‌ಗಳದ್ದೇ ಕಾಲ.

**◆ ಅಭಿಷೇಕ್ ಅಂಬರೀಶ್ ಅವರಲ್ಲಿ ನಿಮಗೆ ಇಷ್ಟವಾದ ಅಂಶಗಳೇನು?**

ಅಭಿಷೇಕ್ ಅವರ ಹೈಟ್ ಚೆನ್ನಾಗಿದೆ. ನೂರು ಜನರಲ್ಲಿ ನಿಲ್ಲಿಸಿದರೂ ಎದ್ದು ಕಾಣುತ್ತಾರೆ. ಜೊತೆಗೆ ಅವರಿಗೆ ತುಂಬ ಸತ್ವಶಾಲಿಯಾದ ಧ್ವನಿ ಇದೆ. ಅಂಬರೀಶಣ್ಣನಲ್ಲಿ ಇದ್ದ ಧ್ವನಿಯೇ ಅವರಿಗೂ ಬಂದಿದೆ. ಅವರಿಂದ ಸಾಕಷ್ಟು ವಿಷಯಗಳನ್ನು ತೆಗೆದುಕೊಳ್ಳಬಹುದು. ಅವರೂ ‘ಬ್ಯಾಡ್ ಮ್ಯಾನರ್ಸ್’ ಕಥೆ ಕೇಳಿದ ನಂತರ ಸಣ್ಣಗಾಗಲು, ಇನ್ನಷ್ಟು ಫಿಟ್ ಆಗಿ ಕಾಣಿಸಿಕೊಳ್ಳಲು ಶ್ರಮವಹಿಸುತ್ತಿದ್ದಾರೆ.

ನಟನೆಯ ವಿಷಯದಲ್ಲಿಯೂ ಅಷ್ಟೆ. ಅಭಿ ನೋಡಿದಷ್ಟು ನಟರು, ಅವರು ನೋಡಿದಷ್ಟು ದೇಶಗಳು, ಅವರು ಭೇಟಿಮಾಡಿದಷ್ಟು ಜನರು ಕೊಟ್ಟ ಅನುಭವಗಳೆಲ್ಲವೂ ಅವರಲ್ಲಿವೆ. ನಾವು ಬರೆದುಕೊಂಡಿರುವ ಕಥೆಗೆ ಆ ಹುಡುಗ ತುಂಬ ಮ್ಯಾಚ್ ಆಗುತ್ತಾನೆ. ಖಂಡಿತವಾಗಿಯೂ ಒಂದು ಅದ್ಭುತವಾದ ಸಿನಿಮಾ ನೀವು ನೋಡುತ್ತೀರಿ. ಆ ಹುಡುಗನಲ್ಲಿ ಅಷ್ಟು ಸಾಮರ್ಥ್ಯ ಇದೆ. ಮೂರ್ತಿ ಕೆತ್ತುವವನಿಗೆ ಕಲ್ಲು ಎಂಥದ್ದು ಎಂದು ನೋಡಿದರೆ ತಿಳಿಯುತ್ತದೆ. ಅದೇ ರೀತಿ ಒಬ್ಬ ನಿರ್ದೇಶಕನಾಗಿ ಹೇಳುವುದಾದರೆ ಅಭಿಗೆ ಖಂಡಿತ ಒಳ್ಳೆಯ ಭವಿಷ್ಯ ಇದೆ. ಖಂಡಿತ ಆತ ಒಳ್ಳೆಯ ಸ್ಕೇಲ್‌ನಲ್ಲಿ ಮೇನ್‌ಸ್ಟ್ರೀಮ್‌ನಲ್ಲಿ ಮೆರೀತಾನೆ.

ನನ್ನ ಸ್ಟೈಲ್‌ಗಂತೂ ಅಭಿ ತುಂಬ ಚೆನ್ನಾಗಿ ಮ್ಯಾಚ್ ಆಗುತ್ತಾರೆ. ಅವರಲ್ಲಿ ಸಾಕಷ್ಟು ವಿಷಯಗಳಿವೆ. ಅದನ್ನು ಹೊರಗೆ ತೆಗೆಯಬೇಕಷ್ಟೆ. ನಾನೇನೂ ಅವರಿಗೆ ಕತ್ತಿವರಸೆ, ಕುದುರೆ ಸವಾರಿ, ಬೆಂಕಿಯೊಂದಿಗೆ ಜಿಗಿಯುವುದೆಲ್ಲ ಹೇಳಿಕೊಡಬೇಕಾಗಿಲ್ಲ. ಅವರು ಮನುಷ್ಯರ ಜೊತೆ ವರ್ತಿಸುತ್ತಾರಲ್ವಾ? ಅದನ್ನೇ ಇಟ್ಟುಕೊಂಡರೆ ಸಾಕು. ಅವರು ಹೇಗಿದಾರೋ ಹಾಗೆಯೇ ತೋರಿಸುತ್ತೇನೆ.

**◆ ನಿಮ್ಮ ಹಿಂದಿನ ಸಿನಿಮಾ ‘ಪಾಪ್‌ಕಾರ್ನ್ ಮಂಕಿ ಟೈಗರ್’ಗೆ ಸಿಕ್ಕ ಸ್ಪಂದನ ಹೇಗಿತ್ತು?**

ಜನರು ನನ್ನ ಸಿನಿಮಾಗೆ ಏನು ಕೊಡಬೇಕಾಗಿತ್ತೋ ಅದೆಲ್ಲವನ್ನೂ ಕೊಟ್ಟಿದ್ದಾರೆ. ಯಾರಿಗೆ ತಲುಪಬೇಕಾಗಿತ್ತೋ ಅವರಿಗೆ ತಲುಪಿದೆ. ಈಗ ಟೀವಿ ಹಕ್ಕು ಮಾರಾಟವಾಗಿದೆ. ಅದರ ಮೂಲಕ ಇನ್ನೊಂದಿಷ್ಟು ಜನಕ್ಕೆ ತಲುಪುತ್ತದೆ. ಸಿನಿಮಾ ಬಿಡುಗಡೆಯಾಗಿ 21ನೇ ದಿನಕ್ಕೇ ಲಾಕ್‌ಡೌನ್ ಆಗಿದ್ದರಿಂದ ಸ್ವಲ್ಪ ಹಣಕಾಸಿನ ತೊಂದರೆ ಆಗಿದೆ. ಅದಕ್ಕೆ ಜನರೇನು ಮಾಡುತ್ತಾರೆ ಪಾಪ?

**◆ ಕೊರೊನಾ ಅನಿರೀಕ್ಷಿತವಾಗಿ ಎರಗಿದೆ. ಇದರಿಂದ ಚಿತ್ರರಂಗವೂ ಸಾಕಷ್ಟು ತೊಂದರೆಗೆ ಸಿಲುಕಿದೆ.**

ಚಿತ್ರರಂಗವಷ್ಟೇ ಅಲ್ಲ, ಇಡೀ ಮನುಷ್ಯ ಕುಲಕ್ಕೇ ಇದು ಬೇಕಾಗಿತ್ತು; ಬಂದಿದೆ. ಮನುಷ್ಯ ಅಂದರೆ ಆಸೆ. ಆಸೆ ಪಟ್ಟರೇ ಮನುಷ್ಯ. ಯಾವ ಯಾವ ಸ್ಕೇಲ್‌ನಲ್ಲಿ ಆಸೆಪಡ್ತಾನೋ ಆಯಾ ಸ್ಕೇಲ್‌ನಲ್ಲಿ ಕರ್ಮಗಳನ್ನು ಅನುಭವಿಸಿ ಹೋಗ್ತಾರೆ ಅಷ್ಟೆ. ನೀವು ಏನು ಆಸೆ ಇದೆ ಅನ್ನುವುದರ ಮೇಲೆ ನೀವ್ಯಾರು ಎನ್ನುವುದು ಅವಲಂಬಿತವಾಗುತ್ತದೆ.

**◆ ಲಾಕ್‌ಡೌನ್ ಸಮಯದಲ್ಲಿ ಚಿತ್ರರಂಗದ ಹಲವು ತರುಣರು ಆತ್ಮಹತ್ಯೆ ಮಾಡಿಕೊಂಡಿದ್ದಾರಲ್ಲಾ...**

ಏನು ಹೇಳುವುದು? ಯಾರಿಗೆ ಏನು ಹೇಳುವುದೂ ಕಷ್ಟ.



ಚಿತ್ರ: ಆನಂದ ಬಕ್ಷಿ